ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 28.02.2024
ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಎಂದು, ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳು ಸತ್ಯ ಇರುತ್ತವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದಾಗಿರುತ್ತದೆ ಎಂದು ನುಡಿದಿರುತ್ತಾರೆ.

ನಾನು ಆನ್ ಡಿಮ್ಯಾಂಡ್ ಪ್ರನೋಟ್, ಹಣಸಂದ ರಶೀದಿ, ದಿಃ 22.08.2022 ರ ಲೀಗಲ್ ನೋಟೀಸ್ ಕಛೇರಿ ಪ್ರತಿ, ಒಂದು ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ ನಿಪಿ.4 ಎಂದು ಗುರುತಿಸಲಾಯಿತು. ನಿಪಿ.1 ಮತ್ತು 2 ಕ್ಕೆ ಪ್ರತಿವಾದಿ ತನ್ನ ಹೆಬ್ಬೆಟ್ಟಿನ ಗುರುತು ಹಾಗೂ ಸಹಿಗಳನ್ನು ಹಾಕಿರುತ್ತಾರೆ. ನಿಪಿ.1 ಮತ್ತು 2 ಅನ್ನು ಹೆಚ್.ಪಿ.ವಿಶ್ವನಾಥ ಎನ್ನುವ ಪತ್ರಬರಹಗಾರರು ತಯಾರಿಸಿರುತ್ತಾರೆ. ನಿಪಿ.1 ಮತ್ತು ನಿಪಿ.2 ಕ್ಕೆ ಪರಮೇಶ್ ಮತ್ತು ಕೃಷ್ಣ ಎನ್ನುವವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ನಿಪಿ.1 ಮತ್ತು 2 ರಲ್ಲಿರುವ ಪ್ರತಿವಾದಿಗಳ ಮತ್ತು ಸಾಕ್ಷಿಗಳ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1-ಎ, ನಿಪಿ.2-ಎ, ನಿಪಿ.1-ಬಿ, ನಿಪಿ.2-ಬಿ, ನಿಪಿ.1-ಸಿ, ನಿಪಿ.2-ಸಿ, ನಿಪಿ.1-ಡಿ ಹಾಗೂ ನಿಪಿ.2-ಡಿ ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟಿ ಸವಾಲುಃ ಪ್ರತಿವಾದಿಗಳ ಪರ

ಪ್ರತಿವಾದಿಗಳು ಹಾಗೂ ಅವರ ವಕೀಲರು ಗೈರು ಹಾಜರಾಗಿದ್ದು ಪಾಟಿ ಸವಾಲಿಗಾಗಿ ಸಮಯಾವಕಾಶ ನೀಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.